**ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಲಯ, ಸಿರುಗುಪ್ಪ**

**ಸಿ.ಸಿ. ನಂ.100 /2020**

**ಸಿ.ಡಬ್ಲ್ಯೂಃ 2 ಪಿ.ಡಬ್ಲ್ಯೂಃ 2**

| | | |
|---|---|---|
| ಸಾಕ್ಷಿದಾರನ ಹೆಸರು | : | ವೀರೇಶ |
| ತಂದೆಯ ಹೆಸರು | : | ಗಂಗಪ್ಪ |
| ವಯಸ್ಸು | : | 42 ವರ್ಷ |
| ಕೆಲಸ | : | ವ್ಯವಸಾಯ |
| ವಾಸ | : | ಯರಕಲ್ಲು ಗ್ರಾಮ |

**ಸಾಕ್ಷಿಗೆ ದಿನಾಂಕಃ25.03.2024 ರಂದು ಪ್ರಮಾಣ ವಚನ ಬೋಧಿಸಲಾಯಿತು**

## ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ

1. ಸಾಕ್ಷಿಗೆ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿರುವ ಸಹಿಯನ್ನು ಸಾಕ್ಷಿಯು ಗುರುತಿಸಿದ್ದರಿಂದ ಸದರಿ ಪಂಚನಾಮೆಯನ್ನು ಈಗಾಗಲೆ ನಿ.ಪಿ.1 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.1(ಬಿ ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸುಮಾರು 3 ವರ್ಷಗಳ ಹಿಂದೆ ತೆಕ್ಕಲಕೋಟೆ ಪೊಲೀಸ್ ಠಾಣೆಯಲ್ಲಿ ಪೊಲೀಸರ ಕೋರಿಕೆಯ ಮೇರೆಗೆ ಮಾಡಿರುತ್ತೇನೆ . ಸಾಕೆಯು ನ್ಯಾಯಾಲಯದ ಮುಂದಿರುವ ಎಂಒ 1 ರಿಂದ 12 ನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಗಳನ್ನು ಎಂಒ 1(ಬಿ) ರಿಂದ 12 (ಬಿ) ಎಂದು ಗುರುತಿಸಲಾಯಿತು. ನಿ.ಪಿ.1 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿದಾರರು ಅಭಿಯೋಜಕರಿಗೆ ಸಹಾಯವಾಗಿ ಸಾಕ್ಷ್ಯನುಡಿಯುತ್ತಿಲ್ಲ ಆದ ಕಾರಣ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಮತ್ತು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಗಿದೆ)**

## ಪಾಟೀ ಸವಾಲುಃ ಸ.ಸ.ಅ. ರವರಿಂದ

2. ದಿಃ10.09.2019 ರಂದು ಚಾಸಾ.1 ರವರು ನನ್ನ ಮತ್ತು ಚಾಸಾ.3 ರವರ ಸಮಕ್ಷಮ ಹೆರಕಲ್ಲು ಗ್ರಾಮದಲ್ಲಿರುವ ಓಬಳೇಶ ರವರ ಡಬ್ಬಿ ಅಂಗಡಿಯ ಮುಂದೆ ದಾಳಿ ಮಾಡಿ 1 ನೇಆರೋಪಿಯ ವಶದಿಂದ ರೂ.8880/- ವಶಪಡಿಸಿಕೊಂಡಿದ್ದರು ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ

-

ಎಂದುನುಡಿಯುತ್ತಾರೆ. ಅದೇ ರೀತಿ ಇನ್ನೊಬ್ಬ ವ್ಯಕ್ತಿಯ ಹಸೆರನ್ನು ವಿಚಾರಿಸಿದಾಗ ಆತನು ತನ್ನಹೆಸರು ಹನುಮೇಶ ತಂದೆ ರಾಮಣಣ ಎಂದುಹೇಳಿರುತ್ತಾನೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅವರ ಹತ್ತಿರ 12 ರಟ್ಟಿನ ಬಾಕ್ಸ ಗಳು ಇದ್ದು ಕ್ರಮವಾಗಿ ಪರಿಶೀಲಿಸಿ 1 ಬಾಕ್ಸ ನಲ್ಲಿ 90 ಎಂಎಲ್ ನ ಒರಿಜಿನಲ್ ಚಾಯ್ಸ ವಿಸ್ಕಿಯ 96 ಟೆಟ್ರಾ ಪ್ಯಾಕೆಟ್ ಗಳು , ಇನ್ನೊಂದು ಬಾಕ್ಸ ನಲ್ಲಿ 90 ಎಂಎಲ್ ನ ಒರಿಜಿನಲ್ ಚಾಯ್ಸ ವಿಸ್ಕಿಯ 96 ಟೆಟ್ರಾ ಪ್ಯಾಕೆಟ್ ಗಳು , ಇನ್ನೊಂದು ಬಾಕ್ಸ ನಲ್ಲಿ 90 ಎಂಎಲ್ ನ ಒರಿಜಿನಲ್ ಚಾಯ್ಸ ವಿಸ್ಕಿಯ 78 ಟೆಟ್ರಾ ಪ್ಯಾಕೆಟ್ ಗಳು , ಇನ್ನೊಂದು ಬಾಕ್ಸ ನಲ್ಲಿ 180 ಎಂಎಲ್ ನ ಒರಿಜಿನಲ್ ಚಾಯ್ಸ ವಿಸ್ಕಿಯ 45 ಟೆಟ್ರಾ ಪ್ಯಾಕೆಟ್ ಗಳು , ಇನ್ನೊಂದು ಬಾಕ್ಸ ನಲ್ಲಿ 90 ಎಂಎಲ್ ನ ಒಲ್ಡ ಟವರಿನ್ ವಿಸ್ಕಿಯ 96 ಟೆಟ್ರಾ ಪ್ಯಾಕೆಟ್ ಗಳು , ಇನ್ನೊಂದು ಬಾಕ್ಸ ನಲ್ಲಿ 90 ಎಂಎಲ್ ನ ಒಲ್ಡ ಟವರಿನ್ ವಿಸ್ಕಿಯ 96 ಟೆಟ್ರಾ ಪ್ಯಾಕೆಟ್ ಗಳು , ಇನ್ನೊಂದು ಬಾಕ್ಸ ನಲ್ಲಿ 90 ಎಂಎಲ್ ನ ಒಲ್ಡ ಟವರಿನ್ ವಿಸ್ಕಿಯ 96 ಟೆಟ್ರಾ ಪ್ಯಾಕೆಟ್ ಗಳು , ಇನ್ನೊಂದು ಬಾಕ್ಸ ನಲ್ಲಿ 180 ಎಂಎಲ್ ನ 8 ಪಿಎಂ ವಿಸ್ಕಿಯ 48 ಟೆಟ್ರಾ ಪ್ಯಾಕೆಟ್ ಗಳು , ಇನ್ನೊಂದು ಬಾಕ್ಸ ನಲ್ಲಿ 90 ಎಂಎಲ್ ನ 8 ಪಿಎಂ ವಿಸ್ಕಿಯ 96 ಟೆಟ್ರಾ ಪ್ಯಾಕೆಟ್ ಗಳು , ಇನ್ನೊಂದು ಬಾಕ್ಸ ನಲ್ಲಿ 90 ಎಂಎಲ್ ನ 8 ಪಿಎಂ ವಿಸ್ಕಿಯ 55 ಟೆಟ್ರಾ ಪ್ಯಾಕೆಟ್ ಗಳು , ಇನ್ನೊಂದು ಬಾಕ್ಸ ನಲ್ಲಿ 90 ಎಂಎಲ್ ನ ಹೈವಾರ್ಡ್ಸ ವಿಸ್ಕಿಯ 74 ಟೆಟ್ರಾ ಪ್ಯಾಕೆಟ್ ಗಳು , ಇನ್ನೊಂದು ಬಾಕ್ಸ ನಲ್ಲಿ 90 ಎಂಎಲ್ ನ ಮ್ಯಾಕ್ ಡೋವಲ್ ರಮ್ ನ 69 ಟೆಟ್ರಾ ಪ್ಯಾಕೆಟ್ ಗಳನ್ನು ನಮ್ಮ ಸಮಕ್ಷಮ ಜಪ್ತುಪಡಿಸಿಕೊಂಡು ಸ್ಥಳದಿಂದಪಂಚನಾಮೆ ಮಾಡಿ ಸಹಿ ಪಡೆಯಲಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ.1 ರಂತೆ ನನ್ನ ಸಮಕ್ಷಮ ಪಂಚನಾಮೆ ಮಾಡಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರವಾಗಿ : ಏನೂ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)
ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ.**